ದಿನಾಂಕಃ 19-12-2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

<u>ಪಾಟೀ ಸವಾಲುಃ **1** ನೇ ಆರೋಪಿ ಪರ ಶ್ರೀ ವಕೀಲರಿಂದ</u>

ನನ್ನ ಅಧಿಕಾರ ವ್ಯಾಪ್ತಿಯಲ್ಲಿ 4 ಶಾಖೆಗಳು ಬರುತ್ತವೆ. ನಾನು ವೈಯಯಕ್ತಿಕ ದಾಖಲಗಳನವ್ನ ಪರಿಶೀಲಿಸಿ ಆರೋಪಿತರು ವ್ಯಸಗಿರು ಕೃತ್ಯದ ಬಗ್ಗೆ ಗೊತ್ತಾಗಿದೆ. ಲೆಡ್ಜರ್ ಗಳು, ಬಂಗಾರ ಇಟ್ಟ ಪ್ಯಾಕೆಟ್ ಗಳನ್ನು ನೋಡಿದ್ದೇನೆ. ಸಾಕ್ಷಿ ಮುಂದುವರೆದು ಲೆಕ್ಕ ಪರಿಶೋಧಕರು ಪ್ಯಾಕೆಟ್ ಗಳನ್ನು ತೆಗೆದಾಗ ನೋಡಿದ್ದೇನೆ ಎಂದು ನುಡಿಯುತ್ತಾರೆ.

ಬಂಗಾರ ಇಡುವ ಲಾಕರ್ ಗೆ 2 ಕೀಗಳು ಇರುತ್ತವೆ ಎಂದರೆ ಸರಿ. ಲಾಕರ್ ನಲ್ಲಿ ಬಂಗಾರ ಇಡುವಾಗ ಮತ್ತು ತೆಗೆಯುವಾಗ ಲೆಡ್ಜರ್ ನಲ್ಲಿ ಬರೆಯಬೇಕು ಎಂದರೆ ಸರಿ. ಆ ಲೆಡ್ಜರ್ ಗಳನ್ನು ಸ್ಟಾಕ್ ರಿಜಿಸ್ಟಾರ್ ಮತ್ತು ರಿಡಂಷನ್ ರಿಜಿಸ್ಟಾರ್ ಎಂದು ಕರೆಯುತ್ತಾರೆ ಎಂದರೆ ಸರಿ. ಆ ಎರಡು ರಿಜಿಸ್ಟಾರ್ ಗಳನ್ನು ನೋಡಿದರೆ ಅವ್ಯವಾಹಾರಗಳ ಬಗ್ಗೆ ಗೊತ್ತಾಗುತ್ತದೆ ಎಂದರೆ ಸರಿ ಅಲ್ಲ, ಸಾಕ್ಷಿ ಮುಂದುವರೆದು ಒಳಗಡಗೆ ಇಟ್ಟ ಬಂಗಾರವನ್ನು ಪರಿಶೀಲಸಿದರೆ ಗೊತ್ತಾಗುತ್ತದೆ ಎಂದು ನುಡಿಯುತ್ತಾರೆ. ದಾಸ್ತಾನು ವಹಿಯನ್ನು ನೋಡದೆ ಅವ್ಯವಹಾರ ಗೊತ್ತಾಗುವುದಿಲ್ಲ ಎಂದರೆ ,ಅದರಲ್ಲಿ ಏನು ಬರೆದಿರುತ್ತಾರೆ ಎಂದು ಅದನ್ನು ನೋಡಿದರೆ ಗೊತ್ತಾಗುತ್ತದೆ.

ಸಿಂಧನೂರ ಶಾಖೆಯಲ್ಲಿ ಶಿವಕುಮಾರ್ ಎನ್ ಮತ್ತು ಇಪ್ತೇಕರ್ ಹುಸೇನ್ ಎನ್ನುವವರು ಕೆಲಸ ಮಾಡುತ್ತಾರೆ ಎಂದರೆ ಸರಿ. ಅವರ ಬಳಿ ಒಂದು ಲಾಕರ್ ಕೀ ಇತ್ತು ಎಂದರೆ ಸರಿ ಅಲ್ಲ. ಸಾಕ್ಷಿ ಮುಂದುವರದು ಪ್ರಭಾರದಲ್ಲಿದ್ದ ಅಧಿಕಾರಿಯ ಗೈರು ಹಾಜರು ಇದ್ದಾಗ ಅವರ ಬಳಿ ಇರುತ್ತಿತ್ತು ಎಂದು ನುಡಿಯುತ್ತಾರೆ.

ಲಾಕರ್ ಕೀ ಜೆಸಿ 1 ಮತ್ತು 2 ಯಾರ ಬಳಿ ಇರುತ್ತವೋ ಅವರು ಮರಳಿ ನೀಡುವವರಗೆ ಅವರ ಬಳಿ ಇರುತ್ತವೆ ಎಂದರೆ ಸರಿ. ನಮ್ಮಲ್ಲಿ ಪ್ರತಿ 2 ಅಥವಾ 3 ತಿಂಗಳಿಗೊಮ್ಮೆ ಲೆಕ್ಕ ಪರಿಶೋಧನೆ ಅಗುತ್ತದೆ ನಿರ್ದಿಷ್ಟವಾಗಿ ಯಾವಾಗ ಅಗುತ್ತದೆ ಎಂದು ಹೇಳಲಾಗುವುದಿಲ್ಲ. ನಾನು ಪೋಲಿಸರಿಗೆ ಲಕ್ಕ ಪರಿಶೋಧನೆಯನ್ನು ನೀಡಿಲ್ಲ. ವ್ಯವಸ್ಥಾಪಕರು ನೀಡಿರಬಹುದು. ಲೆಕ್ಕ ಪರಿಶೋಧನ ವರದಿಯಲ್ಲಿ ಯಾವ ಯಾವ ದಾಖಲೆಗಳನ್ನು ಪರಿಶೀಲಿಸಲಾಗಿದೆ ಎಂದು ಮತ್ತು ಒಂದು ವೇಳೆ ಅವ್ಯವಹಾರ ಆದರೆ ಅದರ ಬಗ್ಗೆ ನಮೂದಿಸಿರುತ್ತಾರೆ ಎಂದರೆ ಸರಿ.

* ದಿಃ 24-06-2013 ರಂದು ಲೆಕ್ಕ ಪರಿಶೋಧನೆ ಮಾಡಿದಾಗ ಎಲ್ಲಾ ಸರಿಯಾಗಿ ಇತ್ತು, ಅದೇ ರೀತಿ ದಿಃ 23-08-2013 ರಂದು ಪುನಃ ಲೆಕ್ಕ ಪರಿಶೋಧನೆ ಮಾಡಿದಾಗ ಅವ್ಯವಹಾರವಾಗಿದೆ ಎಂದು ಕಂಡುಬಂದ ನಂತರ ನಾನು ಗಂಗಾವತಿಯಲ್ಲಿರುವಾಗ ಪೋನ್ ಕರೆಯ ಮೂಲಕ ಗೊತ್ತಾಯಿತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಅದೇ ದಿನ ನಾನು ಮತ್ತು ಚಾಸಾ-3 ರವರು ಸಿಂಧನೂರು ಶಾಖೆಗೆ ಬಂದು ನೋಡಿದೆವು, ದಿಃ 25-06-2013 ರಿಂದ ದಿಃ 25-08-2013 ರ ಅವಧಿಯಲ್ಲಿ ಆರೋಪಿತರು ಗ್ರಾಹಕರಿಂದ ಬಂಗಾರದ ಸಾಲದ ಹಣವನ್ನು ಮರಳಿ ಪಡೆದು ಬಂಗಾರವನ್ನು ಗ್ರಾಹಕರಿಗೆ ನೀಡಿ ಬ್ಯಾಂಕ್ ಗೆ ಜಮಾ ಮಾಡದೇ ಹಾಗೂ ಕೆಲವು ಬಂಗಾರದ ಪ್ಯಾಕೆಟ್ ಗಳಲ್ಲಿ ಬೇರೆ ಬೇರೆ ವಸ್ತುಗಳನ್ನು ಇಟ್ಟು ಸುಮಾರು ರೂ. 54,70,900/- ಹಣವನ್ನು ಆರೋಪಿತರು ದುರುಪಯೋಗ ಮಾಡಿಕೊಂಡ ಬಗ್ಗೆ ಕಂಡು ಬಂತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ. ಈ ಬಗ್ಗೆ 1 ನೇ ಆರೋಪಿಯನ್ನು ವಿಚಾರಿಸಲಾಗಿ ಆತನು ಒಪ್ಪಿಕೊಂಡು ಒಪ್ಪಿಗೆ ಪತ್ರ ಬರೆದುಕೊಟ್ಟಿದ್ದಾನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿ ಅಲ್ಲ ಒಂದು ಲಾಕರ್ ಕೀ 1 ನೇ ಆರೋಪಿ ಬಳಿ ಮತ್ತು ಇನ್ನೊಂದು ಲಾಕರ್ ಕೀ 2 ನೇ ಆರೆಪಿ ಬಳಿ ಇದ್ದವು, 2 ನೇ ಆರೋಪಿ ಬಳಿ ದ್ದ ಕೀಯನ್ನು ನೀಡಿ ಅವ್ಯವಹಾರ ಮಾಡಿದ ಬಗ್ಗೆ ಗೊತ್ತಾಯಿತು ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ. ಚಾಸ 5 ರಿಂದ 23 ರವರ ಪೈಕಿ 13 ಗ್ರಾಯಕರ ಹೆಸರಿನಲ್ಲಿ ಸುಳ್ಳು ಖಾತೆಗಳನ್ನು ತೆಗೆದು ಖಾಲಿ ಪ್ಯಾಕೆಟ್ ಗಳಿಗೆ ಸಾವನ್ನು ತೋರಿಸಿ ಆರೆವಾೀಪಿತರು ಹಣ ದುರ್ಬಳಕೆ ಮಾಡಿಕೊಂಡಿದ್ದಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ನಿಪಿ.4 ಕೀ ನಿರ್ವಹಿಸುವ ವಹಿ. ನಿಃ 23/08/2013 ರಂದು 1 ನೇ ಆರೋಪಿಯ ಸಹಿ ಇರುವುದಿಲ್ಲ. ಕೇವಲ ಇಪ್ತೇಕರ್ ಹುಸೇನ್ ರವರ ಸಹಿ ಇದೆ ಎಂದರೆ ಸರಿ. ದಿಃ 13/07/2013 ರಂದು 1 ನೇ ಆರೋಪಿಯ ಸಹಿಇದೆ ಎಂದರೆ ಸರಿ. ದಿಃ 13/07/2013 ರ ನಂತರ ವೀರಮ್ಮ, ಶಿವಕುಮಾರ್ ಎನ್ ಮತ್ತು ಇಪ್ತೇಕರ್ ಹುಸೇನ್‌ರವರ ಸಹಿ ಇವೆ ಎಂದರೆ ದಿಃ 23/08/2013 ರಂದು 1 ನೇ ಆರೋಪಿ ಕಡೆಯಿಂದ ಇಪ್ತೇಕರ್ ಹುಸೇನ್ ರವರು 1 ನೇ ಕೀಯನ್ನು ಪಡೆದುಕೊಂಡ ಬಗ್ಗೆ ಸಾಕ್ಷಿ ನುಡಿಯುತ್ತಾರೆ. ನಂತರ ದಿನಾಂಕಗಳಲ್ಲಿ 1 ನೇ ಆರೋಪಿಯ ಸಹಿ ಇಲ್ಲ ಎಂದರೆ ಸರಿ.

ನಿಪಿ. 4 ರಂತೆ 1 ನೇ ಕೀಯನ್ನು ಶಿವಕುಮಾರ್ ಎಚ್ ಎಮ್ ರವರು ನಿರ್ವಹಿಸುತ್ತಿದ್ದರು 1 ನೇ ಕೀಯನ್ನು 2 ನೇ ಆರೋಪಿಯು ನಿರ್ವಹಿಸುತ್ತಿದ್ದರು. 2 ನೇ ಆರೋಪಿಯ ಹೆಸರಿನ ಮುಂದೆ ಯಾವ ಕೀ ಎಂದು ದಿಃ 17-07-2013 ರಂದು ಬರೆದಿಲ್ಲ ಎಂದರೆ ಸರಿ. ದಿಃ 12-07-2013,

13-07-2013 ಮತ್ತು 17-07-2013 ರಂದು ಯಾರು ಯಾವ ಕೀಯನ್ನು ನಿರ್ವಹಿಸಿದ್ದಾರೆ



ಎಂದು ಬರೆದಿಲ್ಲ ಎಂದರೆ ಸರಿ. ದಿಃ 23-08-2013 ರಂದು ಶಿವಕುಮಾರ್ ಎನ್ ರವರು 2 ನೇ ಕೀಯನ್ನು ಪಡೆದುಕೊಂಡ ಬಗ್ಗೆ ಉಲ್ಲೇಖ ಇದೆ ಎಂದರೆ ಸರಿ.

ದಿಃ 25-06-2013 ರಿಂದ 25-08-2013 ರವರೆಗಿನ ಅವಧಿಯಲ್ಲಿ ಯಾರು ಯಾರು ಕೀಗಳನ್ನು ನಿರ್ಹಿಸಿದ್ದಾರೆ ವಿಚಾರಣೆ ಮಾಡಿದ್ದೀರಾ ಎಂದರೆ ಸಾಕ್ಷಿಯು ದಿಃ 25-06-2013 ರಿಂದ ದಿಃ 25-08-2013 ಅವಧಿಯಲ್ಲಿ ಕೀ ನಿರ್ವಹಿಸಿದ್ದರವರನ್ನು ವಿಚಾರಿಸಿದ್ದೇವೆ. ಆ ಅವಧಿಯಲ್ಲಿ ಆರೋಪಿತರು, ಇಫ್ತೇಕರ್ ಹುಸೇನ್ ಮತ್ತು ಶಿವಕುಮಾರ್.ಎನ್ ರವರು ಬರುತ್ತಾರೆ ಎಂದರೆ ಸರಿ ಅಲ್ಲ.

ನ್ಯಾಯಾಲಯ ಬೆಳಗಿನ ಅವಧಿ ಮುಗಿದಿದ್ದರಿಂದ ಮಧ್ಯಾಹ್ನದ ಅವಧಿಗೆ ಮುಂದುವರೆದ ಪಾಟೀ ಸವಾಲಿಗಾಗಿ ಮುಂದುಡಲಾಗಿದೆ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.



ದಿನಾಂಕಃ 19-12-2022 ರಂದು ಸಾಕ್ಷಿಯನ್ನು ಪುನಃ ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.

ಮುಂದುವರೆದ ಪಾಟೀ ಸವಾಲುಃ **1** ನೇ ಆರೋಪಿ ಪರ ಶ್ರೀ ವಕೀಲರಿಂದ

ನಿಪಿ.5 ಬಂಗಾರದ ದಸ್ತಾನು ವಹಿ . ದಿಃ 25-06-2013 ರಿಂದ 22-08-2013 ರವರೆಗೆ ಜೆಸಿ-2 ಕಲಂನಲ್ಲಿರುವ ಸಹಿಯು ಶಿವಕುಮಾರ್ ಎನ್ ರವರ ಸಹಿ ಎಂದರೆ ಸರಿ. ಜೆ ಸಿ 1 ಮತ್ತು 2

ರವರು ಯಾರು ನಿಪಿ 5 ರಲ್ಲಿ ಸಹಿ ಮಾಡಿದ್ದಾರೋ ಅವರು ನಿಪಿ 5 ನ್ನು ನಿರ್ವಹಿಸುತ್ತಾರೆ ಎಂದರೆ ಸರಿ. ಶಿವಕುಮಾರ್ ಎನ್ ರವರ ವಿರುದ್ಧ ಯಾವುದೇ ಕ್ರಮ ಜರುಗಿಸಿಲ್ಲ



1 ನೇ ಆರೋಪಿಯ ಏರಿಯಾ ಮ್ಯಾನೇಜರ್ ಇದ್ದರು ಎಂದರೆ ಸಾಕ್ಷಿಯು ಮೊದಲು ಬಂಗಾರ ಸಾಲದ ಮ್ಯಾನೇಜರ್ ಅನಂತರ ಬಂಗಾರ ಸಾಲದ ಏರಿಯಾ ಮ್ಯಾನೇಜರ್ ಎಂದು ಕೆಲಸ ನಿರ್ವಹಿಸುತ್ತಿದ್ದರು. ಅವರ ವ್ಯಾಪ್ತಿಯಲ್ಲಿ ಸಿಂಧನೂರು, ರಾಯಚೂರು, ಲಿಂಗಸೂಗುರು, ಗಂಗಾವತಿ ಮತ್ತು ಸಿರುಗುಪ್ಪ ಬರುತ್ತಿದ್ದವು ಎಂದರೆ ಸರಿ. ಏರಿಯಾ ಮ್ಯಾನೇಜರ್ ರವರ ಕಾಮಗಾರಿ ಆದೇಶವನ್ನು ನಾನು ಪೋಲಿಸರಿಗೆ ನೀಡಿಲ್ಲ, ಚಾಸಾ 1 ರವರು ನೀಡಿಬಹುದು.

ನಿಪಿ 5 ರಲ್ಲಿ ದಿಃ 22-08-2013 ರಂದು ಮತ್ತು ದಿಃ 23-08-2013 ರಂದು ಜೆಸಿ 1 ರ ಕಲಂನಲ್ಲಿ ಇಫ್ತೇಕರ್ ಹುಸೇನ್ ರವರ ಸಹಿ ಇದೆ. ಬಂಗಾರದ ದುರುಪಯೋಗವಾದ ಬಗ್ಗೆ ಗ್ರಾಹಕರು ಯಾವುದೇ ದೂರು ನೀಡಿರಲಿಲ್ಲ.

ಆರೋಪಿತರು ಯಾವುದೇ ಅಪರಾಧ ಮಾಡದೇ ಇದ್ದರು ಸಹ ನಾವು ಅವರ ವಿರುದ್ದ ಸುಳ್ಳು ಪ್ರಕರಣವನ್ನು ದಾಖಲಿಸಿ ಸುಳ್ಳುಸಾಕ್ಷಿ ನುಡಿಯುತ್ತಿದ್ದೇನೆ ಎಂದರೆ ಸರಿ ಅಲ್ಲ.

ಮರುವಿಚಾರಣೆ ಇಲ್ಲ.

(ನನ್ನ ಉಕ್ತದ ಹೇಳಿಕೆಯಂತೆ ತೆರೆದ ನ್ಯಾಯಾಲಯದಲ್ಲಿ ಬೆರಳಚ್ಚು ಮಾಡಿರುತ್ತಾರೆ)

ಓ ಹೇ ಕೇ ಸರಿ ಇದೆ.

ಪ್ರಧಾನ ಜೆ.ಎಮ್.ಎಫ್.ಸಿ., ಸಿಂಧನೂರು.